ಗಂಡ, ಹೆಂಡತಿ ಇಬ್ಬರೇ ಕೈ ಬೀಸಿಕೊಂಡು ಬಂದಿದ್ದನ್ನು ನೋಡಿದ ರಾಧಮ್ಮನ ತಲೆ ಕೆಟ್ಟು ಮೊಸರುಗಡಿಗೆಯಾಗಿತ್ತು. ಆಡಲು ನೂರು ಮಾತುಗಳು ಒಂದರ ಹಿಂದೊಂದು ಒದ್ದುಕೊಂಡು ಬರುತ್ತಿದ್ದವು. ಆದರೂ ಯಾಕೆ ತುಟಿಯೊಡೆಯಲಿಲ್ಲ ರಾಧಮ್ಮ? ತನ್ನ ಅನುಚಿತ ಮಾತುಗಳು ಮಗನ ಸುಖ ಸಂಸಾರಕ್ಕೆ ಹುಳಿ ಹಿಂಡಬಹುದೆಂಬ ಭೀತಿ? ವೃಥಾ ಮನಸ್ತಾಪಕ್ಕೆ ಕಾರಣವಾಗಬಹುದೆಂಬ ಭಯ? ಅನಿಸಿದ ಮಾತುಗಳನ್ನೆಲ್ಲಾ ಆಡುವಂತಿದ್ದಿದ್ದರೆ ಈ ಪ್ರಪಂಚದಲ್ಲಿ ಯಾವ ಸಂಬಂಧ ಉಳಿದುಕೊಳ್ಳುತ್ತಿತ್ತು? ಗಂಡ, ಮಕ್ಕಳು ಮುಂತಾದ ತೀರಾ ಆಪ್ತವಲಯದ ಆಚೆಗೆ ಎಷ್ಟೇ ಹತ್ತಿರದ ಸಂಬಂಧವಾಗಿರಲಿ, ಒಬ್ಬರ ಮೇಲೊಬ್ಬರಿಗೆ ಸಣ್ಣದೊಂದು ಮತ್ಸರ, ವಿನಾಕಾರಣದ ಪೈಪೋಟಿ, ಮೇಲಾಟದ ಈರ್ಷ್ಯೆ ಇದ್ದಿದ್ದೇ. ಮುಖವಾಡ ಹಾಕಿಕೊಂಡು ಬದುಕುವುದು ಮನುಷ್ಯಪ್ರಾಣಿಗೆ ಎಷ್ಟು ಸಹಜವಾಗಿಬಿಟ್ಟಿದೆ ಅಂದರೆ ಒಂದೊಮ್ಮೆ ಒಬ್ಬರ ಅಂತರಂಗ ತೆರೆದ ಪುಟದಂತೆ ಮತ್ತೊಬ್ಬರಿಗೆ ಸುಸ್ಪಷ್ಟವಾಗುವಂತಿದ್ದಿದ್ದರೆ ಸೌಹಾರ್ದ ಸಂಬಂಧಗಳೇ ಉಳಿದುಕೊಂಡಿರುತ್ತಿರಲಿಲ್ಲವೇನೋ..

ರಾಧಮ್ಮ ತೀರಾ ಬುದ್ಧಿವಂತೆ ಅಲ್ಲದಿದ್ದರೂ ವ್ಯವಹಾರಸ್ಥೆ. ತಮ್ಮ ಇಚ್ಛೆಯ ಮೊಮ್ಮಗಳು ಕಣ್ಣಿಂದ ದೂರವಾದ ಕುರಿತು ಒಂದು ಮಾತು ಕೇಳಲು ಹೋಗಲಿಲ್ಲ. ಬದಲಿಗೆ, 'ಮನೇಲಿ ಎಲ್ರೂ ಹುಷಾರಿದ್ದಾರನೇ? ಅಂತೂ ಪುಟ್ಟೀನ ಬಿಟ್ಟು ಬಂದ್ಬಿಟ್ವಿದ್ದಿ..' ಎನ್ನುವಷ್ಟಕ್ಕೆ ಮನದೊಳಗಿನ ಮಹಾಯುದ್ಧವನ್ನು ನಿಯಂತ್ರಿಸಿಕೊಂಡರು. ನಾಗಶ್ರೀ ಕೂಡಾ ಏನೂ ಆಗದವರ ಹಾಗೆ, 'ಹೂಂ ಅತ್ತೆ..' ಎನ್ನುವ ಸಣ್ಣ ಪ್ರತಿಕ್ರಿಯೆಯಲ್ಲಿ ಅತ್ತೆಯನ್ನು ಸಮರ್ಥವಾಗಿ ಎದುರಿಸಿದ ನೆಮ್ಮದಿ ಕಂಡುಕೊಂಡಳು. ಮನೆಯಲ್ಲಿ ಇನ್ಯಾವ ಭೂಕಂಪ ಎದುರಿಸಬೇಕಾಗುತ್ತದೆಯೋ ಎನ್ನುವ ಕಳವಳದಲ್ಲಿದ್ದ ರಾಮಚಂದ್ರನಿಗೆ ಅಮ್ಮನ ಶಾಂತ ಸ್ವರೂಪ ಕಂಡು ನಿರಾಳವಾಯ್ತು. ನಾಗಶ್ರೀ ಮಾತ್ರ ಏಕಾಂತದಲ್ಲಿ ಗಂಡನೊಡನೆ ಆಡಿಕೊಳ್ಳದೆ ಬಿಡಲಿಲ್ಲ,

'ನಿಮ್ಮಮ್ಮ ಅಳ್ತಾರೆ, ಕರೀತಾರೆ, ಊಟ ಬಿಟ್ಟು ಉಪಾಸ ಕೂರ್ತಾರೆ ಅಂತ ಹತ್ತು ಕತೆ ಕಟ್ಟಿದ್ರಲ್ಲ, ಏನಾಯ್ತು ಗೊರಟು? ಎಂತದೂ ಆಗ್ಲಿಲ್ಲ..'

'ಸುಮ್ನಿರೇ, ನಮ್ಮಮ್ಮಂಗೆ ಸ್ವಾಭಿಮಾನ ಒಂದು ಮುಷ್ಟಿ ಜಾಸ್ತಿ' ವಹಿಸಿಕೊಂಡ ರಾಮಚಂದ್ರ.

'ಆಯ್ತಾಯ್ತು, ಗಂಟು ಕಟ್ಟಿ ಇಟ್ಗಳ್ಳಿ..'

ವಿನಾಕಾರಣ ತನ್ನಮ್ಮನನ್ನು ಹೆಂಡತಿ ಆಡಿಕೊಳ್ಳುತ್ತಿರುವುದು ರಾಮಚಂದ್ರನಿಗೆ ಹಿತವೇನಲ್ಲ. ತೌರಿಗೆ ಹೋಗಿ ಬಂದ ನಂತರ ಹೀಗೆ ವ್ಯಂಗ್ಯವಾಡುವ ಚಾಳಿ ಹೆಚ್ಚಾಗಿರುವುದನ್ನು ಅವನು ಗಮನಿಸಿದ್ದ. ವಿನಾಕಾರಣ ಒಬ್ಬರಿಗೊಬ್ಬರನ್ನು ಕಂಡರೆ ಆಗದಿರುವುದರ ಕುರಿತು ಅಮಾಯಕನಿಗೆ ಅನುಭವ ಇರಲಿಲ್ಲ. ಕೆಲವರು ಎದಿರಾಎದುರು ಹೇಳಿಕೊಳ್ಳುತ್ತಾರೆ. ಕೆಲವರು ಒಳಗೊಳಗೆ ನುಂಗಿಕೊಳ್ಳುತ್ತಾರೆ. ಅಮ್ಮ ಕೂಡಾ ತನ್ನ ಅಸಹನೆಯನ್ನು ನಂಜಿನಂತೆ ನುಂಗಿಕೊಂಡಿರಬಹುದೇ? ಪುಟ್ಟೀ.. ಎನ್ನುವ ಕರೆಯಿಂದಲೇ ಬೆಳಗಾಗುತ್ತಿತ್ತು ಅಮ್ಮನಿಗೆ. ಸೊಂಟದಲ್ಲಿ ಕೂರಿಸಿಕೊಂಡು, ಉಪ್ಪು, ತುಪ್ಪದ ಅನ್ನ ಮಿದ್ದು, ಕಾಗೆ, ನಾಯಿ, ಬೆಕ್ಕು ಎಂದು ಊಟ ಮರೆಸುತ್ತಾ ತುತ್ತು ನುಂಗಿಸಿ, ಮಗಳನ್ನು ಇಷ್ಟೆಲ್ಲಾ ಆರೈಕೆ ಮಾಡುತ್ತಿದ್ದ ಅತ್ತೆಯ ಕುರಿತು ನಾಗಶ್ರೀ ಯಾವತ್ತೂ ಕೃತಜ್ಞತೆ ತೋರಿಸಿದವಳಲ್ಲ.

'ಬೇರೆ ಕೆಲಸಿಲ್ಲ ಅತ್ತೆಗೆ. ಹಶುವಾದ್ರೆ ಅವಳೇ ತಿಂತಾಳೆ. ಒಂದು ದಿನ ಉಪಾಸ ಇದ್ರೆ ಕರಗಿ ಹೋಗಲ್ಲ' ಅನ್ನುವ ಪೈಕಿ. ಕೇವಲ ತನ್ನ ಮಗನಿಗೋಸ್ಕರ ಅಮ್ಮ ಎಲ್ಲವನ್ನೂ ಸೈಸಿಕೊಂಡಳು ಎನ್ನುವುದು ಎಷ್ಟೋ ವರ್ಷಗಳವರೆಗೆ ರಾಮಚಂದ್ರನಿಗೆ ಗೊತ್ತೇ ಆಗಿರಲಿಲ್ಲ. ಗಂಡಸರಿಗೆ ದಪ್ಪ ಚರ್ಮ ಇರುತ್ತದೆಯಾ ಅಥವಾ ಹೆಂಗಸರ ಚರ್ಮ ನಾಜೂಕಾಗಿರುತ್ತದೆಯಾ? ಎರಡೂ ಇರಬಹುದೇನೋ..

* * *

ಅಲ್ಲಿರುವುದು ನಮ್ಮನೆ, ಇಲ್ಲಿರುವುದು ಸುಮ್ಮನೆ ಅನ್ನುವಂತೆ ನಾಗಶ್ರೀ, ರಾಮಚಂದ್ರ ನೆನೆಸಿಕೊಂಡಾಗಲೊಮ್ಮೆ ಮಗಳನ್ನು ನೋಡಲು ಧಾವಿಸುತ್ತಿದ್ದರು. ನಾಕೈದು ದಿನ ಹಾಯಾಗಿ ಕಾಲ ಕಳೆದುಕೊಂಡು ಬರುತ್ತಿದ್ದರು. ಮೊದಮೊದಲು ರಾಧಮ್ಮನಿಗೆ ಒಂದು ನಂಬಿಕೆ ಇತ್ತು. ಇವತ್ತಲ್ಲಾ ನಾಳೆ ಮೊಮ್ಮಗಳನ್ನು ಮತ್ತೆ ಕರೆದುಕೊಂಡು ಬರುತ್ತಾರೆ ಎನ್ನುವ ನಂಬಿಕೆ. ಆದರೆ ನಾಲ್ಕೈದು ತಿಂಗಳು ಕಳೆದರೂ ಈ ಬಗ್ಗೆ ಉಸಿರೊಡೆಯಲಿಲ್ಲ ನಾಗಶ್ರೀ. ಅವಳ ಎದುರು ಬಿಗುಮಾನ ತೋರಿಸಿದರೂ ಮಗನ ಮುಂದೆ ಮನಸ್ಸು ಬಿಚ್ಚಿಡಲು ಯಾತರ ಅಡ್ಡಿ?

'ಏನೋ, ಮಗಿನ್ನ ಕರ್ಕಂಬರೋ ಯೋಚ್ನೆ ಇಲ್ಲನೋ?' ಸೊಸೆ ಮೈ ತೊಳೆಯಲು ಹೋದ ಹೊತ್ತು ಕಾದು ಮಗನನ್ನು ಒಮ್ಮೆ ವಿಚಾರಿಸಿಕೊಂಡಿದ್ದರು.

'ಬರ್ತಾಳೆ ಬಿಡೇ. ಅಲ್ಲಿಗೆ ಲಾಯ್ಕು ಹೊಂದ್ಕಂಡಿದಾಳೆ..'

'ಹಂಗಂತ? ಯಾರ್ಯಾರು ಎಲ್ಲೆಲ್ಲಿ ಬೇರ್ಕೋ ಅಲ್ಲಲ್ಲಿದ್ರೆ ಚಂದ..'

'ಮಗು ಅಜ್ಜನ ಮನೇಲಿದ್ರೆ ಚನ್ನಾಗಿರಲ್ವಾ? ಇದೊಳ್ಳೇ ಕತೆ..'

'ಹಂಗಲ್ಲ ಕಣೋ..'

'ನಿಂಗೇ ಗೊತ್ತಿದೆ ಅಮ್ಮಾ, ನಾಗಶ್ರೀ ಅಮ್ಮ ಭಾರೀ ಸೂಕ್ಷ್ಮದೋರು. ಮಗಳನ್ನ ಕಳಿಸಿಕೊಟ್ಟಿದ್ದನ್ನೇ ಮನಸ್ಸಿಗೆ ಹಚ್ಗಂಡು ಕಂಗಾಲಾಗಿದ್ರು. ಮೊಮ್ಮಗಳ ಮಕ ನೋಡ್ಕಂಡು ಸುಖವಾಗಿರ್ಲಿ ಅಂತ ಮಗಳು ಅಂದ್ಕಂಡ್ರೆ ತಪ್ಪಾ ಅಮ್ಮಾ? ನೀನೇ ಅವಳ ಜಾಗದಲ್ಲಿದ್ದಿದ್ರೆ ಏನಂದ್ಕಂತಿದ್ದಿ, ಯೋಚ್ನೆ ಮಾಡು..'

ಈ ದಿಕ್ಕಿನಲ್ಲಿ ದೇವರಾಣೆ ಯೋಚನೆ ಮಾಡಿರಲಿಲ್ಲ ರಾಧಮ್ಮ. ತಮ್ಮನೆ ಮಗು ತಮ್ಮನೇಲಿರ್ಲಿ ಅನ್ನುವ ಸ್ವಾರ್ಥದ್ದೇ ಮೇಲುಗೈಯಾಗಿತ್ತು. ಮಗಳನ್ನು ಕಳಿಸಿಕೊಡುವಾಗ ಕಿಟ್ಟನೆ ಕಿರುಚಿ ಎಚ್ಚರ ತಪ್ಪಿದ ಸರೋಜಮ್ಮನ ನೆನಪಾಗಿ ಹೆಂಗರುಳಿಗೆ ಅಯ್ಯೋ.. ಅನ್ನಿಸಿತು. ಕೆಲವೊಮ್ಮೆ ಇದ್ದಕ್ಕಿದ್ದಂತೆ ಪಾಪಪ್ರಜ್ಞೆ ಜಾಗೃತವಾಗುವ ಒಂದು ಚಾಳಿ ಇತ್ತು ರಾಧಮ್ಮನಿಗೆ. ಯಾವ ಜನ್ಮದಲ್ಲಿ ಏನು ಪಾಪ ಮಾಡಿದ್ದಕ್ಕೋ ಈ ಜನ್ಮದಲ್ಲಿ ದೇವರು ಕೊಡಬಾರದ ಶಿಕ್ಷೆ ಕೊಟ್ಟುಬಿಟ್ಟ. ಎರಡು ಸಣ್ಣ ಮಕ್ಕಳನ್ನು ಸಾಕಿ, ಬೆಳೆಸಿ, ದೊಡ್ಡ ಮಾಡುವುದರೊಳಗೆ ಬೆನ್ನುಕೋಲು ಬಗ್ಗಿ ಹೋಗಿದೆ. ಇನ್ನಾದರೂ ವಿಪರೀತದ ವ್ಯಾಮೋಹ ಬಿಟ್ಟು ಬದುಕನ್ನು ಬಂದಂತೆ ಸ್ವೀಕರಿಸಲು ಕಲಿಯಬೇಕು. ರಾಮಾ.., ಕೃಷ್ಣಾ.. ಎಂದು ದೇವರ ಧ್ಯಾನ ಮಾಡುತ್ತಾ ತಮ್ಮ ಪಾಡಿಗೆ ತಾವಿರಬೇಕು. ಇದ್ದುಳ್ಳವರ ಮನೆಯ ಹುಡುಗಿ ಸೊಸೆಯಾಗಬೇಕು ಅಂತ ಆಸೆಪಟ್ಟಿದ್ದಕ್ಕೆ ಅಸ್ತು ಅಂದ ದೇವರು. ಅವಳು ತಾನು ಹೇಳಿದಂತೆ ಕೇಳಿಕೊಂಡಿರಬೇಕು ಎನ್ನುವ ಬೇಡಿಕೆ ದುಬಾರಿಯಾಗುತ್ತದೆಯೇನೋ. ಎಲ್ಲರಿಗೂ ಅವರವರ ಇಚ್ಛೆ, ಅನಿಚ್ಛೆ ಇದ್ದೇ ಇರುತ್ತದೆಯಲ್ಲ? ಒಬ್ಬರ ದೃಷ್ಟಿಯಲ್ಲಿ ಸರಿಯಾಗಿ ಕಂಡಿದ್ದು ಇನ್ನೊಬ್ಬರ ದೃಷ್ಟಿಯಲ್ಲಿ ತಪ್ಪಾಗಿ ಕಾಣಬಹುದು. ಹಾಗೆ ಕಾಣಿಸುವುದು ಈ ಲೋಕ ವ್ಯಾಪಾರದಲ್ಲಿ ಸಹಜ. ರಾಧಮ್ಮ ಅದಿನ್ನೆಂತಾ ಸಹಾನುಭೂತಿ ತುಂಬಿ ತುಳುಕುವ ದನಿಯಲ್ಲಿ ಒಂದು ಮಾತು ಹೇಳಿದರು ಅಂದರೆ ಕೇಳಿಸಿಕೊಂಡ ರಾಮಚಂದ್ರನ ಕಣ್ಣು ಒದ್ದೆಯಾಗಿತ್ತು. ಹೇಳಿದ್ದರು ರಾಧಮ್ಮ,

'ನಮ್ಮ ಮೂಗಿನ ನೇರಕ್ಕೇ ಯೋಚ್ನೆ ಮಾಡೋದು ಅಭ್ಯಾಸವಾಗ್ಬಿಟ್ಟಿರುತ್ತೆ ಕಣೋ.. ಕ್ಷಣ ತಡೆದು ಮತ್ತೆ ಹೇಳಿದ್ದರು, ಎಲ್ಲಾರೂ ಇರ್ಲಿ ಕಂದ. ಭರ್ತಿ ಆಯುಷ್ಯ ಹಾಕ್ಕೊಂಡು ಸುಖವಾಗಿರ್ಲಿ'

* * *

ಆ ಸಲ ಮಗಳನ್ನು ನೋಡಲು ಹೊರಟು ನಿಂತಾಗ 'ಬರ್ತೀಯನೇ ಅಮ್ಮ? ಕೂತಲ್ಲೇ ಕೂತು ಜಡ್ಡುಗಟ್ಟಿ ಹೋಗಿದ್ದಿ ನೀನು..' ರಾಮಚಂದ್ರ ಹೃತ್ಪೂರ್ವಕವಾಗಿ ಕರೆದಿದ್ದ. ಹಾಗೆ ಆಹ್ವಾನ ಕೊಟ್ಟವನು ಹೆಂಡತಿಯ ಮುಖಭಾವನೆಯನ್ನು ವಾರೆಗಣ್ಣಲ್ಲಿ ಪರಿಶೀಲಿಸಿದ್ದ. ಅಮ್ಮನ ಮನೆಗೆ ಹೊರಟ ನಾಗಶ್ರೀ ಸುಪ್ರಸನ್ನೆಯಾಗಿಯೇ ಇದ್ದಳು.

## ಉಪವಾಸ

ಪ್ರತಿಭಟನೆ ಉಪವಾಸ
ಮುಖ ಬಹಳ ಸಪ್ಪೆ
ಜಮಖಾನದ ಕೆಳಗೆ
ನೆಲಗಡಲೆ ಸಿಪ್ಪೆ!

★ ದೇವಕಿಸುತ

